''ಟೌನ್‌ಷಿಪ್'' ಅನ್ನು ಈಗಿರುವ ನಗರದ ಹತ್ತಿರ ಎತ್ತರವಾದ ಜಾಗದಲ್ಲಿ ಕಟ್ಟಲು ಸರ್ಕಾರ ಉದ್ದೇಶಿಸಿದೆ.

ಆ) ಈಗಾಗಲೇ ಖರ್ಚು ಮಾಡಿರುವ ಹಣ ರೂ. ೫೪.೨೫ ಲಕ್ಷ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ. ೯೧.೭೫ ಕೋಟಿ.

ಇ) ಸುಮಾರು ಹತ್ತು ವರ್ಷಗಳು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವೆಚ್ಚದ ಬಗ್ಗೆ

೫೭ (೨೧೯) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). – ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾಧಿಕಾರದ ಸಿಬ್ಬಂದಿ ನಿರ್ವಹಣಾ ವೆಚ್ಚವು ಸಿಬ್ಬಂದಿ ಹೊರತುಪಡಿಸಿದ ಬಾಬ್ತುಗಳಿಗೆ ಆಗಿರುವ ಒಟ್ಟು ವೆಚ್ಚ ?

ಆ) ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ರ ಸಾಲಿನಲ್ಲಿ ಪ್ರಾಧಿಕಾರ ಲಾಭಗಳಿಸಿದೆಯೇ ? ಹಾಗಿದ್ದರೆ ಎಷ್ಟು ವಿವರಿಸಿ ?

ಇ) ಈ ಸಾಲುಗಳಲ್ಲಿ ಯಾವುದಾದರೂ ಲೆಕ್ಕ ಪರಿಶೋಧನೆ ಮಾಡಿದ ಆಡಿಟ್‌ರವರ ವರದಿ ಇರುವುದೇ ?

ಈ) ಈ ಸಾಲುಗಳಿಗಿಂತ ಹಿಂದಿನ ಸಾಲುಗಳಿಗೆ ಆಡಿಟ್ ಮಾಡಿದ ಬಗ್ಗೆ ವರದಿಗಳಿವೆಯೇ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಈ ಕೆಳಗಿನಂತಿದೆ.

ವರ್ಷ	ಸಿಬ್ಬಂದಿ ನಿರ್ವಹಣಾ ಕಾರ್ಯಕ್ಕಾಗಿ ಮಾಡಲಾದ ವೆಚ್ಚ	ಸಿಬ್ಬಂದಿ ನಿರ್ವಹಣಾ ಕಾರ್ಯ ಹೊರತು ಪಡಿಸಿ ಮಾಡಲಾದ ವೆಚ್ಚ
	ರೂ.	ರೂ. ಲಕ್ಷಗಳಲ್ಲಿ
೧೯೮೩-೮೪	೧೩೫.೮೭	೧೬೨೩.೮೬
೧೯೮೪-೮೫	೧೩೩.೪೨	೧೯೫೯.೨೬
೧೯೮೫-೮೬	೨೦೫.೪೭	೨೬೪೫.೯೮

ಆ) ಈ ವರ್ಷದ ಅವಧಿಯಲ್ಲಿ ಲಾಭ ಮತ್ತು ನಷ್ಟಗಳನ್ನು ಸೂಚಿಸಲು ಸಾಧ್ಯವಿರುವುದಿಲ್ಲ.

ಇ) ಹೌದು.

೧೯೮೩-೮೪ ರಿಂದ ೧೯೮೫-೮೬ ರವರೆಗೆ ಆಡಿಟ್ ತೆಗೆದುಕೊಳ್ಳಬೇಕಾಗಿರುತ್ತದೆ.

ಈ) ಇರುತ್ತದೆ.

ಜನತಾ ವಸತಿ ಯೋಜನೆ ಬಗ್ಗೆ

೫೮ (೨೨೧) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಗ್ರಾಮಾಂತರ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಸತಿ, ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗ್ರಾಮಾಂತರ ಪ್ರದೇಶದಲ್ಲಿ ಭೂರಹಿತ ಮತ್ತು ನಿವೇಶನ ರಹಿತ ಕುಟುಂಬಗಳೆಷ್ಟು ?

ಆ) (i) ಅವರಲ್ಲಿ ಎಷ್ಟು ಜನಗಳಿಗೆ ಇದುವರೆವಿಗೂ ನಿವೇಶನಗಳನ್ನು ಹಂಚಲಾಗಿದೆ;

(ii) ಮನೆಗಳನ್ನು ಕಟ್ಟಿಕೊಳ್ಳಲು ಎಷ್ಟು ಕುಟುಂಬಗಳಿಗೆ ಸಹಾಯವನ್ನು ಮಾಡಲಾಗಿದೆ ?(೧೯೮೬ರ ಮಾರ್ಚ್ ಅಂತ್ಯದಲ್ಲಿದ್ದಂತೆ ಮಾಹಿತಿಗಳನ್ನು ಕೊಡುವುದು)